<u>ದಿನಾಂಕಃ **25-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ವಿ. ವಕೀಲರಿಂದಃ</u>

ನಾನು ಬಿ.ಎ. ಪಧವಿಧರ ಇರುತ್ತೇನೆ. ನನಗೆ ಮಠದ ಅಕ್ಕ ಪಕ್ಕ ಜಮೀನು ಇರುತ್ತದೆ. ನನಗೆ ದಾವಾ ಸ್ವತ್ತಿನ ಬಗ್ಗೆ ಗೊತ್ತಿರುತ್ತದೆ. ದಾವಾ ಸ್ವತ್ತು ಸ.ನಂ.127 ಇದ್ದು ಅದರ ಪಹಣಿಯನ್ನು ನಾನು ನೋಡಿರುವುದಿಲ್ಲ. ಮಠದ ಪಕ್ಕ ನನ್ನ ಜಮೀನು ಇದ್ದು ಆ ಕಾರಣದಿಂದ ಸ.ನಂ.127 ರಲ್ಲಿ ಆಸ್ತಿ ಬರುತ್ತದೆ ಎಂದು ನಾನು ಹೇಳುತ್ತಿದ್ದೇನೆ. ಸ.ನಂ.127 ರಂಭಾಪುರಿ ಪೀಠದ ಹೆಸರಿನಲ್ಲಿ ಪಹಣಿ ಬರುತ್ತಾ ಇರುತ್ತದೆ. ವಾದಿಯರು ಈ ದಾವೆಯಲ್ಲಿ ಏನೇನು ದಾಖಲೆ ಹಾಕಿರುತ್ತಾರೆ ಎಂದು ನಾನು ನೋಡಿರುವುದಿಲ್ಲ.

2. ವಾದಿಯರ ತಂದೆ ಮಠದ ಎಸ್ಟೇಟ್ ನಲ್ಲಿ ರೈಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಶಿವಲಿಂಗಪ್ಪ ಇವರು ಮಠದ ಕ್ವಾರ್ಟರ್ಸ್ ನಲ್ಲಿ ತಮ್ಮ ಸಂಸಾರದೊಂದಿಗೆ ವಾಸ ಇದ್ದರು. ನನಗೆ ಶಿವಲಿಂಗಪ್ಪ ಇವರಿಗೆ ಸರ್ಕಾರದಿಂದ ಜಮೀನು ಮಂಜೂರು ಆಗಿರುವ ವಿಚಾರ ಗೊತ್ತಿರುತ್ತದೆ. ನನಗೆ ಗೊತ್ತಾಗುವ ಪೂರ್ವದಲ್ಲಿ ಎಷ್ಟು ವರ್ಷ ಮುಂಚೆ ಅವರಿಗೆ ಜಮೀನು ಮಂಜೂರಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಮಂಜೂರಾದ ಆಸ್ತಿ ಎಲ್ಲಿ ಬರುತ್ತದೆ ಎಂದು ಗೊತ್ತಿರುವುದಿಲ್ಲ, ಆದರೆ ಮಠಕ್ಕೆ ಸಂಬಂಧಿಸಿದ 80 ಎಕರೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಮಠಕ್ಕೆ ಆಗಾಗ ಹೋಗಿರುಬರುತ್ತೇನೆ ಎಂದರೆ ಸರಿ. ಮಠಕ್ಕೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಶಿವಲಿಂಗಪ್ಪ ಇವರಿಗೆ ಸಂಬಂಧಿಸಿದಂತೆ ಬರವಣಿಗೆ ಆಗಿರುತ್ತದೆ. ಸ್ವಾಮೀಜಿಯವರು ಕೂರುವ ಪೀಠದ ಪಕ್ಕದಲ್ಲಿ ಬರವಣಿಗೆ ಆಗಿರುತ್ತದೆ. ಆ ದಿನ ಸುಮಾರು ಏಳೆಂಟು ಜನ ಹಾಜರಿದ್ದರು. ಸದರಿ ತಪ್ಪೊಪ್ಪಿಗೆ ಪತ್ರ ಸ್ವಾಮೀಜಿಯವರ ಸಮಕ್ಷಮ ಆಗಿರುತ್ತದೆ. ಶಿವಲಿಂಗಪ್ಪ ಇವರು ತಪ್ಪೊಪ್ಪಿಗೆ ಪತ್ರದಲ್ಲಿನ ವಿಚಾರಗಳನ್ನು ಅವರೇ ಬರೆದಿರುತ್ತಾರೆ.

3. 2023 ರ ನವೆಂಬರ್ ಲೆಕ್ಕಪುಸ್ತಕದಲ್ಲಿ ತಪ್ಪೊಪ್ಪಿಗೆ ಪತ್ರ ಬರೆಯಲಾಗಿರುತ್ತದೆ. ನಿಡಿ-3 ದಿನಾಂಕಃ 08.12.2020 ರ ಕೊನೆಯ ಪುಟದ ಹಾಳೆ ಇರುತ್ತದೆ ಎಂದರೆ ಸರಿ. ತಪ್ಪೊಪ್ಪಿಗೆ ಪತ್ರಕ್ಕೆ ಸ್ವಾಮೀಜಿಯವರು ಸದರಿ ದಿನ ಮಾಡಿರುತ್ತಾರೆ. ನನಗೆ ಶಿವಾನಂದ್

ಅಸಲು ದಾವಾ ನಂಃ 46/2024
ಡಿ.ಡಬ್ಲ್ಯು 5

ಎನ್ನುವವರು ಯಾರು ಎಂದು ಗೊತ್ತಿರುವುದಿಲ್ಲ. ನನಗೆ ರಂಭಾಪುರಿ ಪೀಠದ ಬಗ್ಗೆ ಮಾಹಿತಿ ಇರುತ್ತದೆ. ಸ್ವಾಮೀಜಿಯವರು ಮಠಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಕಾನೂನು ರೀತಿಯಲ್ಲಿ ಮಾಡುತ್ತಾರೆ ಎಂದರೆ ಸರಿ. ನನಗೆ ಮಠದ ವ್ಯವಹಾರ ನೋಡಿಕೊಳ್ಳುವ ಕಾಶೀನಾಥ್ ಇವರ ಬಗ್ಗೆ ಗೊತ್ತಿರುವುದಿಲ್ಲ. ನನಗೆ ಈ ದಾವೆಯಲ್ಲಿ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ವಾದಿಯರು ಈ ದಾವೆಯಲ್ಲಿ ಹಕ್ಕಿಗೆ ಸಂಬಂಧಿಸಿದ ಏನೇನು ದಾಖಲೆಗಳನ್ನು ಹಾಕಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾವು ಹಾಗೂ ಮಠದವರು ಸೇರಿಕೊಂಡು ಮುಚ್ಚಳಿಕೆ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಿವಲಿಂಗಪ್ಪ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆ ದಿನ ಶಿವಲಿಂಗಪ್ಪ ಇವರು ನನ್ನನ್ನು ಮುಚ್ಚಳಿಕೆ ಪತ್ರ ಬರೆದುಕೊಡುವ ಕಾಲಕ್ಕೆ ಕರೆದುಕೊಂಡು ಹೋಗಿದ್ದರು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ಮಠಕ್ಕೆ ಸಂಬಂಧಿಸಿದಿ ದಾಖಲೆಗಳ ಆಧಾರದ ಮೇಲೆ ಬರೆಸಿರುತ್ತೇನೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಲಿಂಗಪ್ಪ ಇವರಿಗೆ ಸಂಬಂಧಿಸಿದ ಆಸ್ತಿಯನ್ನು ಪಡೆಯುವ ಸಲುವಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ